# ಚಿತ್ರ'ಕವಿತ್ವ'



ಜಿ.ಎನ್. ಧನಂಜಯ ಮೂರ್ತಿ

ಕಲೆ: ಮುರಳೀಧರ್ ರಾಥೋಡ್

ಮಧ್ಯಾಹ್ನದ ಊಟ ಪೂರೈಸಿ ಕಾಲೇಜಿನಲ್ಲಿ ರಹಮತ್ ತರೀಕೆರೆಯವರ 'ನಡೆದಷ್ಟೂ ನಾಡ'ನ್ನು ಓದುತ್ತಿದ್ದೆ. ಕಾಲೇಜಿನ ಕಾರಕೂನನಾಗಿ ಕೆಲಸ ಮಾಡುವ ರಿಯಾಜ್ ಬಂದು ಆ ಪುಸ್ತಕವನ್ನು ನೋಡಿ ತನ್ನೊಳಗೆಯೆ ನಗುತ್ತಿದ್ದ. ರಹಮತ್ ಎನ್ನುವ ಹೆಸರು ನೋಡಿ ಖುಷಿಯಾಗಿರಬಹುದೆಂದು ಭಾವಿಸಿ, 'ಯಾಕೋ ಪುಸ್ತಕದಲ್ಲಿ ನಗುವಂತಹದ್ದೇನಿದೆ?' ಎಂದೆ. ಅವನ ಉತ್ತರ ಹೀಗಿತ್ತು; 'ಸೈಕಲ್ ನ ಹೊತ್ಕೊಂಡು ಹೋಗ್ತಿರೋದು ನೋಡಿ ನಗು ಬಂತು ಸರ್'. ಸದರಿ ಹೊತ್ತಗೆಯ ಮೇಲೆ ಸೈಕಲ್ಲನ್ನು ತಲೆಕೆಳಗಾಗಿ ತನ್ನ ಹೆಗಲ ಮೇಲೆ ಹೊತ್ತು ಹೊಳೆಯನ್ನು ದಾಟುತ್ತಿರುವ ವ್ಯಕ್ತಿಯೊಬ್ಬನ ಚಿತ್ರವಿದೆ. ಹಿನ್ನೆಲೆಯಲ್ಲಿ ಸದಾ ನೀರೊಳಗಿದ್ದು ಒಣಗಿದ ಮುಳ್ಳುಕಂಟಿಗಳು, ಅವುಗಳಾಚೆ ಹೊಳೆದಂಡೆಯಲ್ಲಿ ಹಸಿರು ಗಿಡಗಂಟಿಗಳಿವೆ. ತನ್ನನ್ನು ಹೊರಬೇಕಿದ್ದ ಸೈಕಲ್ಲನ್ನು ತಾನೇ ಹೊತ್ತಿದ್ದ ವ್ಯಕ್ತಿಯನ್ನು ಕಂಡು ರಿಯಾಜ್‌ಗೆ ನಗಬೇಕೆನಿಸಿದೆ ಎಂದು ಅವನ ಮುಖಭಾವದ ಅರ್ಥ ತಡವಾಗಿ ಫ್ಲಾಷ್ ಆಯಿತು. 'ಚಿತ್ರವೊಂದು ಸಾವಿರ ಪದಗಳಿಗೆ ಸಮ' ಎಂಬ ಮಾತಿದೆ. ಸಾಹಿತ್ಯಕೃತಿಗಳು ಲೇಖಕರ ಮನೋಗರ್ಭದಿಂದಿಳಿದು ಲೋಕಕ್ಕೆ ತೆರೆದುಕೊಳ್ಳುವಾಗ ಹೆಸರಿನಲ್ಲಿ ತಾತ್ವಿಕತೆಯನ್ನೂ, ಮುಖಪುಟದಲ್ಲಿ ಅರ್ಥವತ್ತಾದ ಚಿತ್ರವನ್ನೂ ಹೊತ್ತು ಬರುತ್ತವೆ. ಈಚೆಗೆ ಈ ಮುಖಪುಟದ ಚಿತ್ರಗಳು ಸೃಜನಶೀಲ ಕೃತಿಗಳಿಗಿಂತ ಹೆಚ್ಚಾಗಿ ವಿಮರ್ಶಾತ್ಮಕ ಮತ್ತು ವೈಚಾರಿಕ ಕೃತಿಗಳಿಗೆ ಕಡ್ಡಾಯವೆಂಬಂತೆ ಬರುತ್ತಿವೆ. ಇವು ಕೃತಿಸದನವನ್ನು ಪ್ರವೇಶಿಸಲು ಸೂಚನೆಗಳಂತೆಯೊ, ಒಟ್ಟಾರೆ ಕೃತಿಯ ಆಶಯವನ್ನು ವ್ಯಕ್ತಪಡಿಸುವ ಸಂಕೇತಗಳಂತೆಯೊ ಆ ಕೃತಿಗೆ ಮುಕುಟಪ್ರಾಯವಾಗಿರುತ್ತವೆ.

ಕುವೆಂಪುರವರ ಕಾದಂಬರಿಗಳು ಸೇರಿದಂತೆ ಅವರ ಬಹುತೇಕ ಕೃತಿಗಳ ಮೇಲೆ ಕಾಜಾಣ ಖಗಗಳ ಚಿತ್ರವಿದೆ. ಅವರ ಗೆಳೆಯರಾದ ಕತೆಗಾರ ಆನಂದ (ಅಜ್ಜಂಪುರ ಸೀತಾರಾಂ) ಅವರು ರಚಿಸಿಕೊಡುತ್ತಿದ್ದ ಚಿತ್ರಗಳಿವು. 'ಇತರೆ ಜೀವಿಗಳನ್ನು ನೋಯಿಸದ, ತನ್ನ ತಂಟೆಗೆ ಬಂದವರನ್ನು ಸುಮ್ಮನೆ ಬಿಡದ ಈ ಕಾಜಾಣ ಕುವೆಂಪುರವರ ಸಮಸ್ತ ಸಾಹಿತ್ಯಿಕ ಜೀವನದ ರೂಪಕದಂತಿದೆ' ಎಂದು ಚಂದ್ರಶೇಖರ ನಂಗಲಿಯವರು ವಿಶ್ಲೇಷಿಸುತ್ತಾರೆ. ಆದರೆ, ಅವರ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಕೃತಿಯ ಮೇಲೆ ಸವಾರನಿಲ್ಲದೆ ಸ್ವತಂತ್ರವಾಗಿ ಜಿಗಿಯುತ್ತಿರುವ ಕುದುರೆಯ ಚಿತ್ರವಿದೆ. 'ದಿವ್ಯ ದರ್ಶನದ ಪ್ರಾಪ್ತಿಗಾಗಿ ನಮಗೆ ಬೇಕಾಗುವ ಧೀರ, ಸ್ವತಂತ್ರ, ಉದಾರ ಪ್ರತಿಭಾಪೂರ್ಣವಾದ ಬುದ್ಧಿಯನ್ನೇ ನಾನು 'ನಿರಂಕುಶಮತಿ' ಎಂದು ಕರೆದಿದ್ದೇನೆ' ಎಂದು ಅಲ್ಲಿ ಅವರು ಹೇಳುತ್ತಾರೆ. ಆ ಲೇಖನದ ಒಟ್ಟಾರೆ ಆಶಯ ಸ್ವತಂತ್ರ ಆಲೋಚನೆಗಳಿಗೆ ಒತ್ತು ಕೊಡುವುದರಿಂದ ಸ್ವತಂತ್ರವಾಗಿ ಜಿಗಿಯುತ್ತಿರುವ ಕುದುರೆ ಇದಕ್ಕೆ ಬೇಕಾದ ಅರ್ಥವನ್ನು ಹೊಮ್ಮಿಸುತ್ತಿರಬಹುದು. (ನವೋದಯದ ಸಂದರ್ಭದ ಸೃಜನಶೀಲ ಕೃತಿಗಳಲ್ಲಿ ಕುದುರೆ ಕಾಮದ ಸಂಕೇತವಾಗಿ ಬರುತ್ತದೆ.) ಕುವೆಂಪು ಕಾದಂಬರಿಗಳ